ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ ಇದು ಮಾನ್ಯ ಪೋತದಾರ್‌ರವರ ಅರೇಂಜ್‌ಮೆಂಟೋ ಅಥವಾ ಮಾನ್ಯ ರಾಮಕೃಷ್ಣ ಹೆಗಡೆಯವರ ಅರೇಂಜ್‌ಮೆಂಟೊ?

ಶ್ರೀ ರಾಮಕೃಷ್ಣ ಹೆಗಡೆ.—ಈ ರೀತಿ ಅರೇಂಜ್‌ಮೆಂಟ್ ಮಾಡುವುದರಲ್ಲಿ ತಾವು ಬಹಳ ನಿಷ್ಣಾತರು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಮಾನ್ಯ ಪೋತದಾರ್‌ರವರ ಶಿಷ್ಯರು ಇದ್ದಹಾಗೆ ಕಾಣುತ್ತದೆ.

ಶ್ರೀ ಆರ್. ಬಿ. ಪೋತದಾರ್.—ಯಾರು ಮಾಡಿದರು ಎಂಬುದು ತಮಗೆ ಗೊತ್ತಿದೆ.

ಶ್ರೀ ಕೆ. ಹೆಚ್. ಪಾಟೀಲ್.—ತಾವು ನಿಜವನ್ನು ಒಪ್ಪಿದ್ದೀರಿ. ಆದರೆ ಹಣಕಾಸಿನ ತೊಂದರೆ ಇರುವುದರಿಂದ ಸಹಕಾರಿ ಮಿಲ್‌ಗಳಿಗೆ ಇತರೆ ರಾಜ್ಯಗಳು ಯಾವ ರೀತಿ ಸೌಕರ್ಯ ಕೊಟ್ಟಿವೆ ಆರೀತಿ ಸೌಕರ್ಯ ಕೊಡುವುದಕ್ಕೆ ಸರ್ಕಾರ ಏನಾದರೂ ಪ್ರಯತ್ನ ಮಾಡುತ್ತಿದೆಯೇ? ಎರಡು ಮಿಲ್‌ಗಳೂ ಎನ್‌ಸಿಡಿಸಿಯಿಂದ ಹಣ ತೆಗೆದುಕೊಳ್ಳಲಿಕ್ಕೆ ಅವು ಡಿಸ್‌ಕ್ವಾಲಿಫೈ ಆಗಿವೆ ಎಂದು ಹೇಳಿದ್ದೀರಿ, ಅಲ್ಲಿ ನಾಮಿನೇಟೆಡ್ ಮೆಂಬರ್ ಇರುವುದರಿಂದ ಹಣ ಕೊಡಬಾರದೆಂದು ಮಾಡಿದ್ದಾರೆ. ಆದ್ದರಿಂದ ಅದನ್ನು ಬದಲಾವಣೆ ಮಾಡಿ ಎಲೆಕ್ಟೆಡ್ ಮೆಂಬರ್ಸ್ ಅನ್ನು ಹಾಕಿ ಎನ್‌ಸಿಡಿಸಿಯಿಂದ ಹಣ ಸಿಗುವ ವ್ಯವಸ್ಥೆ ಮಾಡುತ್ತೀರಾ? ಎನ್‌ಸಿಡಿಸಿ ಹಣ ಸಿಗಬೇಕಾದರೆ ನಮ್ಮ ರಾಜ್ಯ ಸರ್ಕಾರ ೫೦ ಪರ್ಸೆಂಟ್ ಹಣವನ್ನು ಷೇರ್ ಕ್ಯಾಪಿಟಲ್‌ಆಗಿ ಕೊಡಬೇಕಾಗುತ್ತದೆ. ಅದಕ್ಕೆ ಬಡ್ಜೆಟ್ಟಿನಲ್ಲಿ ಪ್ಲಾನಿಂಗ್ ಮಿನಿಸ್ಟರ್ ಏನಾದರೂ ಪ್ರಾವಿಷನ್ ಮಾಡಿದ್ದಾರೆಯೆ?

ಶ್ರೀ ಆರ್. ಬಿ. ಪೋತ್‌ದಾರ್.—ಅದಕ್ಕೋಸ್ಕರ ೧೬-೧೨-೮೭ರಂದು ಒಂದು ಕ್ಯಾಬಿನೆಟ್ ಸಬ್-ಕಮಿಟಿಯನ್ನು ಮಾಡಲಾಗಿದೆ. ಸಿಕ್ ಯೂನಿಟ್ಸ್ ಏನಿವೆ ಅವನ್ನು ಸರಿಪಡಿಸಲಿಕ್ಕೆ ಹೊರಟಿದ್ದೇವೆ. ನಾವು ಇನ್ನೂ ಒಂದು ಮೀಟಿಂಗನ್ನು ಇಷ್ಟರಲ್ಲಿಯೆ ಕರೆಯಲಿದ್ದೇವೆ. ಅವನ್ನು ಸರಿಪಡಿಸಲಿಕ್ಕೆ ಬರುತ್ತದೆಯೇ ಎಂದು ವಿಚಾರ ನಡೆಸಿದ್ದೇವೆ ಮುಂದಿನ ಬಡ್ಜೆಟ್ಟಿನಲ್ಲಿ ಹಣ ಒದಗಿಸುವ ವಿಚಾರದಲ್ಲಿ ಕನ್ಸಿಡರ್ ಮಾಡಲಿಕ್ಕೆ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ.

ಅಂತರಜಾತಿಯ ವಿವಾಹಗಳಿಗೆ ಪ್ರೋತ್ಸಾಹ ಕೊಡುವ ಬಗ್ಗೆ

೫೧೧. ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂತರ್‌ಜಾತೀಯ ವಿವಾಹಗಳಿಗೆ ಸರ್ಕಾರದವರ ಪುರಸ್ಕಾರ ಹಾಗೂ ಧನಸಹಾಯದ ಪ್ರೋತ್ಸಾಹದ ಕಾರ್ಯಕ್ರಮವಿದೆಯೇ?

ಆ) ಅಂತರ್‌ಜಾತೀಯ ವಿವಾಹ ಎಂದರೆ ಸರ್ಕಾರದ ದೃಷ್ಟಿಯಲ್ಲಿ ಹರಿಜನರು ಅನ್ಯ ಜಾತಿಗೆ ಮದುವೆಯಾದರೆ ಮಾತ್ರ ಎಂಬ ಅಭಿಪ್ರಾಯವಿದೆಯೇ?

ಇ) ಸರ್ಕಾರದ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ ೧೪೮ ಎಸ್‌ಎಡಿ ೭೭, ತಾರೀಖು ೨೪-೧೦-೮೦ರಂದು ಹೊರಡಿಸಿದ ಈ ಆದೇಶ ಅನ್ವಯ ಯಾವ ಕೋಮಿನವರಿಗೆ ಅದು ಅನ್ವಯಿಸುತ್ತದೆ?

ಈ) ಗಿರಿಜನರು ಬೇರೆ ಜನಾಂಗದವರನ್ನು ಮದುವೆಯಾದರೆ ಅದು ಅಂತರ್‌ಜಾತೀಯ ಮದುವೆ ಆಗುವುದಿಲ್ಲವೇ?

ಉ) ಅಂತಹವರಿಗೆ ಈ ಸರ್ಕಾರದ ಆದೇಶ ಅನ್ವಯಿಸುವುದಿಲ್ಲವೇ?

ಊ) ಸರ್ಕಾರ ಹರಿಜನರಿಗೆ ಕಲ್ಪಿಸಿದಂತೆ, ಗಿರಿಜನರಿಗೂ ಹೊಂದಿಕೊಂಡಿರುವಾಗ ಈ ಸೌಲಭ್ಯ ಗಿರಿಜನರಿಗೆ ಅನ್ವಯಿಸುವುದಿಲ್ಲದಿರುವುದು ಸರಿಯೇ, ಇದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಇದೆ.

ಆ) ಅಂತಹ ಅಭಿಪ್ರಾಯವೇನೂ ಇಲ್ಲ. ಹರಿಜನರನ್ನು ಅಸ್ಪೃಶ್ಯರೆಂದೂ ಪರಿಗಣಿಸಿದ್ದು, ಈ ಜಾತಿಯವರು ಸವರ್ಣೀಯರನ್ನು ಅಥವಾ ಸವರ್ಣೀಯರು ಹರಿಜನರನ್ನು ಮದುವೆಯಾದರೆ ಮಾತ್ರ ಪ್ರೋತ್ಸಾಹಿಸುವ ಯೋಜನೆ ಇದೆ.

ಇ) ಈ ಯೋಜನೆಯು ಹಿಂದೂ ಸಮಾಜದ ಸವರ್ಣೀಯರು ಹರಿಜನರನ್ನು ಅಥವಾ ಹರಿಜನರ ಸವರ್ಣೀಯರನ್ನು ಮದುವೆಯಾದಲ್ಲಿ ಅನ್ವಯಿಸುತ್ತದೆ.

ಈ) ಆಗುತ್ತದೆ. ಆದರೆ ಈ ಯೋಜನೆ ಅನ್ವಯವಾಗುವುದಿಲ್ಲ.

ಉ) ಅನ್ವಯಿಸುವುದಿಲ್ಲ.

ಊ) ಹಿಂದೂ ಸಮಾಜದಲ್ಲಿ ಹರಿಜನರನ್ನು ಅಸ್ಪೃಶ್ಯರೆಂದು ಪರಿಗಣಿಸಿದ್ದು ಇಂತಹ ಜಾತಿಯವರನ್ನು ಸವರ್ಣೀಯರು ಅಥವಾ ಸವರ್ಣೀಯರು ಈ ಜಾತೀಯವರನ್ನು ಮದುವೆಯಾದಾಗ ಆ ದಂಪತಿಗಳು ಸಮಾಜದಿಂದ ಬಹಿಷ್ಕರಿಸಲ್ಪಟ್ಟು, ಹಲವಾರು ಮಾನಸಿಕ ಹಾಗೂ ಸಾಮಾಜಿಕ ಕಷ್ಟಗಳಿಗೆ ಗುರಿಯಾಗುವುದರಿಂದ ಅಂತಹ ದಂಪತಿಗಳಿಗೆ ಉತ್ತೇಜನ ನೀಡಲು ಹಾಗೂ ಸವರ್ಣೀಯರು ಮತ್ತು ಹರಿಜನರ ನಡುವೆ ಇರುವ ಅಂತರವನ್ನು ಹೋಗಲಾಡಿಸುವ ಸಲುವಾಗಿ ಈ ಯೋಜನೆಯನ್ನು ಜಾರಿಗೆ ತಂದಿದೆ. ಗಿರಿಜನರು ಸವರ್ಣೀಯರ ಗುಂಪಿಗೆ ಸೇರಿರುವ ಕಾರಣ, ಈ ಯೋಜನೆ ಅವರಿಗೆ ಅನ್ವಯವಾಗುವುದಿಲ್ಲ,

ಶ್ರೀಮತಿ ಸುಮಾ ವಸಂತ.—ಎಲ್ಲಾ ಕಛೇರಿಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಅಂತರ್ಜಾತೀಯ ವಿವಾಹಕ್ಕೆ ಪ್ರೋತ್ಸಾಹ ಎಂದು ಇದೆಯೇ ಹೊರತು ಯಾವ ವರ್ಗಕ್ಕೆ ಅಥವಾ ಯಾವ ವರ್ಗಕ್ಕೆ ಎಂದು ಇಲ್ಲ. ಒಳವರ್ಗಗಳಲ್ಲಿ ಮದುವೆಯಾದರೆ ಈ ಸಮಾಜ ಸಹಿಸುವುದಿಲ್ಲ. ಅಂಥದ್ದರಲ್ಲಿ ಅಂತರ್ಜಾತೀಯ ವಿವಾಹವನ್ನು ಸಮಾಜ ಹೇಗೆ ಸಹಿಸುತ್ತದೆ ? ಆದ್ದರಿಂದ ಈ ಜಾತೀಯತೆಯನ್ನು ತೊಡೆಯಬೇಕಾದರೆ ಅಂತರ್ಜಾತೀಯ ವಿವಾಹಗಳಿಗೆ ಕನಿಷ್ಟ ೫ ಸಾವಿರ ರೂಪಾಯಿಗಳ ಪ್ರೋತ್ಸಾಹ ಧನವನ್ನು ನೀಡುತ್ತೀರಾ ?

ಶ್ರೀಮತಿ ಶಿವಕಾಂತ ಚಿತ್ತರಿ.—ಪರಿಶೀಲಿಸಲಾಗುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಈ ಉತ್ತರ ಸರಿಯಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.—ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಿರಿಜನರ ವರ್ಗದಿಂದ ಸೇರಿದವರು ಬಹಳ ಮಂದಿ ಇದ್ದಾರೆ. ಅಂಥವರು ಸವರ್ಣೀಯರನ್ನು ಮದುವೆಯಾದರೆ ಧನ ಸಹಾಯ ಕೊಡುತ್ತೀರಾ ?

ಶ್ರೀ ಜಿ. ಬಸವಣ್ಣೆಪ್ಪ.—ಅಂತರ್ಜಾತೀಯ ವಿವಾಹ ಆಗಬೇಕೆಂಬುದಕ್ಕೆ ಸರ್ಕಾರ ಎಲ್ಲಾ ರೀತಿಯ ಪ್ರೋತ್ಸಾಹ ಕೊಡುತ್ತದೆ. ವಿಶೇಷವಾಗಿ ೫ ಸಾವಿರ ರೂಪಾಯಿಗಳನ್ನು ಕೊಡುತಕ್ಕ ಕಾರ್ಯಕ್ರಮ ಏನಿದೆ ಇದು ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವ ಮೂಲೋದ್ದೇಶದಿಂದ ಹರಿಜನರನ್ನು ಯಾರು ಮದುವೆಯಾಗುಯಾಗುತ್ತಾರೆ ಅವರಿಗೆ ಅನ್ವಯಿಸತಕ್ಕದ್ದಾಗಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿರತಕ್ಕ ಈ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ಗಿರಿಜನರು ಬರುವುದಿಲ್ಲ. ಹರಿಜನರು ಸವರ್ಣೀಯರನ್ನು, ಸವರ್ಣೀಯರು ಹರಿಜನರನ್ನು ಮಾಡುವೆ ಆಗಬಹುದು. ಅಂಥವರ ವರಮಾನ ೧೫ ಸಾವಿರ ರೂಪಾಯಿಗಳ ಒಳಗೆ ಇರಬೇಕು. ಅಂಥವರಿಗೆ ಮಾತ್ರ ಈ ವಿಶೇಷ ಸೌಲಭ್ಯ ಇದೆ. ಗಿರಿಜನರಿಗೆ ಈ ಸೌಲಭ್ಯ ಅನ್ವಯಿಸುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ —ಹಣಕಾಸಿನ ಸೌಲಭ್ಯದ ವಿಷಯದಲ್ಲಿ ಸರ್ಕಾರದ ಪರವಾಗಿ ಹೇಳಿಕೆಯನ್ನು ಪಡೆದೆವು. ಇವತ್ತು ಸಮಾಜದಲ್ಲಿರತಕ್ಕ ಹರಿಜನ ಮತ್ತು ಗಿರಿಜನರನ್ನು ಮದುವೆಯಾಗತಕ್ಕ ಇತರ ವರ್ಗದ ಜನರಿಗೆ ಸರ್ಕಾರಿ ನೌಕರಿ ಕೊಡುವ ನೀತಿ ಏನಾದರೂ ನಿಮ್ಮಲ್ಲಿ ಇದೆಯೇ ?

ಶ್ರೀ ಜಿ. ಬಸವಣ್ಣೆಪ್ಪ.—ಕಾನೂನು ಪ್ರಕಾರ ಪ್ರಾವಿಷನ್ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಈ ಬಗ್ಗೆ ತಪ್ಪು ಸರ್ಕಾರದ ನೀತಿ ಏನು ?

ಶ್ರೀ ಜಿ. ಬಸವಣ್ಣೆಪ್ಪ.—ಇದು ಒಳ್ಳೆಯ ಸಲಹೆ. ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಲಕ್ಕಪ್ಪ.—ಜಾತೀಯತೆ ಹೋಗಲಾಡಿಸಲು ಬೇರೆ ಬೇರೆ ಜಾತಿಯವರು ಮದುವೆ ಆಗಿರುತ್ತಾರೆ. ಇಂತಹವರಿಗೆ ಏನು ಸೌಲಭ್ಯ ಕೊಡುತ್ತೀರಿ ?

ಶ್ರೀ ಜಿ. ಬಸವಣ್ಣೆಪ್ಪ.—ದೇಶದಲ್ಲಿ ಜಾತೀಯತೆ ಹೋಗಲು ಅಂತರ ಜಾತಿ ವಿವಾಹಗಳು ನಡೆದು ಕೊಂಡು ಬಂದಿವೆ. ಇದಕ್ಕೆ ಸಮಾಜ ಸರ್ಕಾರ ಒದ್ದವಾಗಿದೆ. ಆದರೆ ಸಮಾಜ ಕಲ್ಯಾಣ ಇಲಾಖೆಯ ಪಾಲಿಸಿ ಪ್ರಕಾರ ಅಸ್ಪೃಶ್ಯತೆ ಹೋಗಲಾಡಿಸಲು ಹರಿಜನರ ಮತ್ತು ಸವರ್ಣೀಯರ ನಡುವೆ ಮದುವೆ ಯಾದಲ್ಲಿ, ಅಂತಹವರ ವರಮಾನ ೧೨ ಸಾವಿರ ರೂಪಾಯಿಗಳ ಒಳಗೆ ಇದ್ದರೆ ಈ ಸ್ಕೀಮ್ ಅವರಿಗೆ ಅನ್ವಯವಾಗುತ್ತದೆ.

ಶ್ರೀ ಯು. ಭೂಪತಿ.—ಇವತ್ತು ಈ ಕಾರ್ಯದಲ್ಲಿ ಸ್ವಲ್ಪ ತೊಡಕು ಇದೆ. ಒಬ್ಬ ಹರಿಜನ ಮಹಿಳೆಯನ್ನು ಒಬ್ಬ ಮಹಮದೀಯನು ಅಥವಾ ಮುಸ್ಲಿಮನು ಮದುವೆಯಾದರೆ ಅಂತಹವರಿಗೆ ಪ್ರೋತ್ಸಾಹ ಕೊಡುತ್ತೀರಾ ? ದಂಪತಿಗಳಲ್ಲಿ ಯಾರೊಬ್ಬರೂ ಎಸ್. ಸಿ., ಎಸ್. ಟಿ. ಜಾತಿಗೆ ಸೇರಿಲ್ಲದಿದ್ದರೆ, ಬೇರೆ ಧರ್ಮಕ್ಕೆ ಸೇರಿದ್ದರೆ ಅಂತಹವರಿಗೂ ಪ್ರೋತ್ಸಾಹ ಕೊಡುತ್ತೀರಾ? ತಮಿಳುನಾಡಿನಲ್ಲಿ ಅಂತರಜಾತಿ ವಿವಾಹವಾದ ಜನರಿಗೆ ನೌಕರಿ ಕೊಡುವ ಬಗ್ಗೆ ರಿಸರ್ವೇಷನ್ ಇದೆಯೆಂದು ಕೇಳಿದ್ದೇನೆ. ಅದನ್ನು ಇಲ್ಲೂ ಜಾರಿಗೆ ತರುತ್ತೀರಾ ?

ಶ್ರೀ ಜಿ. ಬಸವಣ್ಣೆಪ್ಪ.—ಅಧ್ಯಕ್ಷರೇ, ಅಸ್ಪೃಶ್ಯತೆ ಹಿಂದೂ ಧರ್ಮದಲ್ಲಿ ಮಾತ್ರ ಇದೆ. ಹಿಂದೂ ಧರ್ಮದಲ್ಲಿ ಹರಿಜನರಲ್ಲಿ ಅಸ್ಪೃಶ್ಯತೆ ಇದೆ. ಅಂತರ ಜಾತಿ ವಿವಾಹದಲ್ಲಿ ಈ ಇನ್‌ಸೆಂಟೀವ್ ಹಿಂದೂ ಧರ್ಮಕ್ಕೆ ಸೀಮಿತವಾಗಿದೆ. ಕ್ರೈಸ್ತರಿಗಾಗಲೀ, ಮುಸ್ಲಿಮರಿಗಾಗಲೀ ಬೇರೆ ಯಾರಿಗೆ ಆಗಲಿ ಅವಕಾಶ ಇಲ್ಲ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಮುಂದೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಎಂಟನೇ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ಪಟ್ಟಿಯನ್ನು ಸಭೆಯ ಮುಂದಿಡಲಾಯಿತು.

(ಈ ಸಮಯದಲ್ಲಿ ಪ್ರೇಕ್ಷಕರ ಗ್ಯಾಲರಿಯಿಂದ ಜೈಕಾರದ ಶಬ್ದಗಳು ಕೇಳಿ ಬಂದವು)

ಆಶಾಕಿರಣ ಯೋಜನೆ

೧೩೫. ಶ್ರೀಮತಿ ಕೆ ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಆಶಾಕಿರಣ ಯೋಜನೆ ಜಾರಿಗೆ ಬಂದನಂತರ ಸದರಿ ಯೋಜನೆಯಡಿಯಲ್ಲಿ ಪರಿಹಾರವನ್ನು ಕೋರಿ ಸರ್ಕಾರಕ್ಕೆ ಈವರೆವಿಗೆ ಬಂದಿರುವ ಮನವಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿಗಳನ್ನು ಒದಗಿಸುವುದು).

ಆ) ಸದರಿ ಮನವಿಗಳಲ್ಲಿ ಈವರೆಗಿನ ಎಷ್ಟು ಜನರಿಗೆ ಪರಿಹಾರವನ್ನು ನೀಡಲಾಗಿದೆ ಹಾಗೂ ೧೯೮೭ರನೇ ಸಾಲಿನಲ್ಲಿ ಈವರೆವಿಗೆ ನೀಡಿರುವ ಒಟ್ಟು ಮೊತ್ತವೆಷ್ಟು ? (ಜಿಲ್ಲಾವಾರು ಮಾಹಿತಿ ಒದಗಿಸುವುದು).

ಇ) ಇನ್ನುಳಿದವರಿಗೆ ಪರಿಹಾರವನ್ನು ನೀಡಲು ವಿಳಂಬವಾಗಲು ಕಾರಣಗಳೇನು ?

ಶ್ರೀ ಜಿ. ಎಸ್, ಬಾಗಲಕೋಟೆ (ಕಾರ್ಮಿಕ ಸಚಿವರ ಪರವಾಗಿ).—

ಅ) ಒಟ್ಟು ೧೫೯೧ (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ ೧ರಲ್ಲಿ ಲಗತ್ತಿಸಿದೆ).